ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ವರದಾ ನದಿ ಮೂಲದಿಂದ ಶಿಗ್ಗಾಂವ, ಸವಣೂರು ಮತ್ತು ಬಂಕಾಪುರಗಳಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿ 745 ಲಕ್ಷ ರೂಪಾಯಿಗಳ ಒಂದು ಯೋಜನೆ 1991ರಲ್ಲಿ ಮಂಜೂರಾಗಿದೆ. ಈ ಮಧ್ಯೆ ವರದಾ ನದಿಯಿಂದ ಬರತಕ್ಕಂಥ ನೀರನ್ನು ನಾಗನೂರು ಕೆರೆಯಲ್ಲಿ ಶೇಖರಿಸಿ ಶಿಗ್ಗಾಂವ ಮತ್ತು ಸವಣೂರಿಗೆ ನೀರು ಒದಗಿಸುವ ಬಗ್ಗೆ ಒಂದು ಯೋಜನೆ ತಯಾರು ಮಾಡಲಾಗಿದ್ದು, ಅದರಂತೆ ನಾಗನೂರು ಕೆರೆಯ ನೀರಿನ ಶೇಖರಣೆಯ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈಗ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ 17 ಕೋಟಿ ರೂಪಾಯಿಗಳಿಗೆ ಏರಿರುವ ಪ್ರಸ್ತಾವ ಸರ್ಕಾರದ ಮುಂದಿದೆ. ಈ ಯೋಜನೆಗೆ ಸಂಬಂಧಪಟ್ಟಂತೆ ಟ್ರೀಟ್‌ಮೆಂಟ್ ಪ್ಲಾಂಟ್ ಅಳವಡಿಸುವ ಬಗ್ಗೆ ಟೆಂಡರ್ ಕರೆಯಲಾಗಿದೆ, ಈ ಟ್ರೀಟ್‌ಮೆಂಟ್ ಪ್ಲಾಂಟ್ ಅಳವಡಿಸುವುದರಿಂದ ನಾಗನೂರು ಕೆರೆಯಲ್ಲಿ ಶೇಖರವಾಗುವ ಮಳೆ ನೀರನ್ನು ಶುದ್ದೀಕರಿಸಿ ಒದಗಿಸಬಹುದಾಗಿದೆ. ಈ ಟ್ರೀಟ್‌ಮೆಂಟ್ ಪ್ಲಾಂಟ್ ಅಳವಡಿಸುವುದಕ್ಕಾಗಿಯೇ 98 ಲಕ್ಷ ರೂಪಾಯಿಗಳ ಅಂದಾಜನ್ನು ಮಾಡಲಾಗಿದೆ. ಆದಷ್ಟು ಬೇಗ ಕೆಲಸ ಮುಗಿಸಿಕೊಡಲಾಗುತ್ತದೆ. ಇನ್ನೊಂದು ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ ಬಂಕಾಪುರ ಗ್ರಾಮವು ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಅವರೂ ಹಣವನ್ನು ತುಂಬಬೇಕಾಗುತ್ತದೆ. ಆ ಬಗ್ಗೆ ನಾನು ಗ್ರಾಮೀಣಾಭಿವೃದ್ಧಿ ಮಂತ್ರಿಯವರೊಡನೆ ಪ್ರಸ್ತಾಪ ಮಾಡಿದ್ದೇನೆ.

ವಿಷಯ:- ಹುಣಸೂರು ಪಟ್ಟಣಕ್ಕೆ ಚುಂಚನ ಕಟ್ಟೆಯಿಂದ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 141 (1114)

ಶ್ರೀ ವಿಜಯಶಂಕರ್ ಸಿ.ಹೆಚ್. (ಹುಣಸೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಣಸೂರು ಪಟ್ಟಣಕ್ಕೆ ಪಕ್ಕದ ಚುಂಚನ ಕಟ್ಟೆ ಭಾಗದಿಂದ ಕುಡಿಯುವ ನೀರಿನ ಉದ್ದೇಶಕ್ಕಾಗಿ ಕಾವೇರಿ ನೀರನ್ನು ಒದಗಿಸಿಕೊಡುವ ಯೋಜನೆಗೆ ಸರ್ಕಾರದವರ ಒಪ್ಪಿಗೆ ದೊರೆತಿದೆಯೇ? ಸದರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) Whether a scheme from the near by Chunchunakatte area for providing drinking water to Hunsur town with cauvery river is approved? When the work will be started?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಈ ಪಟ್ಟಣಕ್ಕೆ ಕುಡಿಯುವ ನೀರಿನ ಅಭಿವೃದ್ಧಿ ಯೋಜನೆಯ ತಾಂತ್ರಿಕ ಸಾಧ್ಯತಾ

ವರದಿಯನ್ನು ತಯಾರಿಸಲು ನ್ಯಾಷನಲ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ರವರಿಗೆ ವಹಿಸಲಾಗಿದ್ದು ಈ ವರದಿ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಆ) The work of preparing a feasibility report for improving drinking water supply to this town is entrusted to National Industrial Development Corporation. Further action will be taken after receipt of the report.

ಶ್ರೀ ಸಿ.ಹೆಚ್.ವಿಜಯಶಂಕರ್:- ನಮ್ಮ ಹುಣಸೂರು ಪಟ್ಟಣಕ್ಕೆ ಚುಂಚನ ಕಟ್ಟೆ ಭಾಗದಿಂದ ಕಾವೇರಿ ನದಿ ನೀರನ್ನು ಕೊಟ್ಟು ಕುಡಿಯವ ನೀರಿನ ಸಮಸ್ಯೆ ಪರಿಹರಿಸಬೇಕು. ಬೇಸಿಗೆಯಲ್ಲಿ ಐದಾರು ತಿಂಗಳು ಹುಣಸೂರಿನಲ್ಲಿ ಕಾಲರ ಬರುತ್ತದೆ. ಆ ಸಮಯದಲ್ಲಿ ಪ್ರತಿಯೊಬ್ಬರೂ ಕುದಿಸಿದ ನೀರನ್ನು ಕುಡಿಯಬೇಕಾದ ಪ್ರಸಂಗ ಇದೆ. ಲಕ್ಷ್ಮಣ ತೀರ್ಥ ನದಿಯು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ, ಬೇಸಿಗೆಯಲ್ಲಿ ಹರಿಯದೇ ಇರುವುದರಿಂದ ನಿಂತ ನೀರನ್ನು ಹುಣಸೂರು ಪಟ್ಟಣಕ್ಕೆ ಸರಬರಾಜು ಮಾಡುವುದರಿಂದ ನಮ್ಮಲ್ಲಿ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ, ಚುಂಚನಕಟ್ಟೆ ಭಾಗದಿಂದ ಕಾವೇರಿ ನದಿ ನೀರನ್ನು ಹುಣಸೂರು ಪಟ್ಟಣಕ್ಕೆ ಸರಬರಾಜು ಮಾಡಬೇಕೆಂಬ ಬೇಡಿಕೆ ಬಹಳ ದಿವಸದಿಂದ ಇದೆ. ಈ ಯೋಜನೆ ಮಾಡುವ ಸಲುವಾಗಿ ಆದಷ್ಟು ಬೇಗ ಸರ್ವೇ ಮಾಡಿಸಿ ಕೆಲಸವನ್ನು ಪ್ರಾರಂಭ ಮಾಡಬೇಕು. ನಮ್ಮ ಹುಣಸೂರು ಪಟ್ಟಣದ ಜನರೂ ಕಾವೇರಿ ನದಿ ನೀರನ್ನು ಕುಡಿಯುವುದಕ್ಕೆ ಆದಷ್ಟು ಬೇಗ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಹುಣಸೂರು ಪಟ್ಟಣಕ್ಕೆ ಲಕ್ಷ್ಮಣ ತೀರ್ಥ ನದಿಯಿಂದ ಕುಡಿಯುವ ನೀರು ಸರಬರಜು ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಕಾವೇರಿ ನದಿ ನೀರನ್ನು ಹುಣಸೂರು ಪಟ್ಟಣಕ್ಕೆ ಒದಗಿಸಬೇಕೆಂದು ಕೇಳಿದ್ದಾರೆ, ಅದರಂತೆ ಸರ್ಕಾರ 8 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿದೆ. ಹುಣಸೂರು ಪಟ್ಟಣಕ್ಕೆ ಕಾವೇರಿ ನೀರು ಸರಬರಾಜು ಮಾಡುವುದಕ್ಕೆ ಹಾಕುವ ಪೈಪ್ ಲೈನ್ ಅಕ್ಕ ಪಕ್ಕಗಳಲ್ಲಿ ಬರುವ 8 ಹಳ್ಳಿಗಳಿಗೂ ಕೂಡ ಕುಡಿಯುವ ನೀರು ಒದಗಿಸುವ ಪ್ರಸ್ತಾವನೆ ಈ ಯೋಜನೆಯಲ್ಲಿ ಅಡಕವಾಗಿದೆ. ಇದೇ ರೀತಿ ಯೋಜನೆಗಳನ್ನು ರಾಜ್ಯದ 19 ಪಟ್ಟಣ ಪ್ರದೇಶಗಳಲ್ಲಿ ವರ್ಲ್ಡ್ ಬ್ಯಾಂಕ್ ಮತ್ತು ಎನ್‌ಐಡಿಸಿ ಪ್ರೋಗ್ರಾಮ್‌ನಲ್ಲಿ 400 ಕೋಟಿ ರೂಪಾಯಿಗೆ ಅಂದಾಜು ವೆಚ್ಚದಲ್ಲಿ ತೆಗೆದುಕೊಳ್ಳುವ ಉದ್ದೇಶ ಹೊಂದಿದೆ, ಈ 19 ಪಟ್ಟಣಗಳಲ್ಲಿ ಹುಣಸೂರು ಪಟ್ಟಣವೂ ಒಂದಾಗಿದೆ. ಆದಷ್ಟು ಬೇಗ ಕೆಲಸವನ್ನು ಮಾಡಲಾಗುತ್ತದೆ.

ವಿಷಯ:- ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಲಭ್ಯ.